ಕ್ರಿಮಿನಲ್.ಮಿಸ್ಲೇನಿಯಸ್.ನಂ. 1444/2022

ಪಿ.ಡಬ್ಲ್ಯೂ -2

**ಸಾಕ್ಷಿಯನ್ನು ಇಂದು ದಿನಾಂಕಃ 09.08.2024 ರಂದು ಕರೆದು ಪ್ರಮಾಣೀಕರಿಸಲಾಯಿತು**

**ಪಾಟೀ ಸವಾಲು ಎದುರುದಾರ ಪರ ಶ್ರೀ ಡಿ.ಎಂ.ಎಂ. ವಕೀಲರಿಂದ**

ನನಗೆ ಒಬ್ಬ ಗಂಡು ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಇರುತ್ತಾರೆ. ನನ್ನ ಮಗ ಸರಕಾರಿ ಶಾಲೆಯಲ್ಲಿ ಶಿಕ್ಷಕನಿರುತ್ತಾನೆ ಎಂದರೆ ಸರಿ ಅಲ್ಲ. ನನ್ನ ಮಗ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ನನ್ನ ಮಗನು ಒಕ್ಕಲುತನ ಮಾಡುವುದಿಲ್ಲ. ನನಗೆ ಮೂರು ಎಕರೆ ಜಮೀನು ಇರುತ್ತದೆ. ನಾನು ಒಕ್ಕಲುತನ ಕೆಲಸ ಮಾಡುವುದಿಲ್ಲ, ಕೂಲಿ ಕೆಲಸ ಮಾಡುತ್ತೇನೆ. ಅರ್ಜಿದಾರ ನಂ.೧ ರವರು ನನಗೆ ಇರುವ ಮೂರು ಎಕರೆ ಜಮೀನನ್ನು ಉಳುಮೆ ಮಾಡುತ್ತಾಳೆ ಎಂಧರೆ ಸರಿ ಅಲ್ಲ. ಅರ್ಜಿದಾರ ನಂ.೧ ರವರಿಗೆ ಎದುರುದಾರನು ಬಂಗಾರ ತೆಗೆದುಕೊಂಡು ಬಾ, ೨ ಲಕ್ಷ ರೂ. ತೆಗೆದುಕೊಂಡು ಬಾ ಎಂದು ಕಿರುಕುಳ

ನೀಡಿರುತ್ತಾನೆ ಎಂದು ಹೇಳಿರುತ್ತೀರಾ, ಅದರ ಬಗ್ಗೆ ಪೋಲಿಸ ಠಾಣೆಯಲ್ಲಿ ಪಿರ್ಯಾದಿ ಸಲ್ಲಿಸಿದ್ದೀರಾ ಎಂಧರೆ ಸಾಕ್ಷಿ ಇಬ್ಬರನ್ನು ಕರೆದು ಬುದ್ದಿವಾದ ಹೇಳಿ ಕಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ೨ ಲಕ್ಷ ರೂ.ಗಳನ್ನು ಬೇಡಿರುತ್ತಾನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ಅವರಿಗೆ ಗೊತ್ತು ಎಂದು ನುಡಿಯುತ್ತಾರೆ. ಅರ್ಜಿದಾರ ನಂ.೧ ರವರನ್ನು ಮರಳಿ ಗಂಡನ ಮನೆಗೆ ಕಳಿಸಲು ನೀವೇನಾದರು ಪ್ರಯತ್ನ ಮಾಡಿದ್ದೀರಾ ಎಂಧರೆ ಸಾಕ್ಷಿ ಮಾಡಿರುತ್ತೇನೆ ನಮ್ಮ ಊರಿನ ಹಿರಿಯರನ್ನು ಸಹ ಕೂಡ ಕರೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿ ಅಲ್ಲ.

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ.ಸಿ.ಆಳಂದ.